ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1600
ಸದಸ್ಯರ ಹೆಸರು : ಶ್ರೀ ಎಸ್. ಎಲ್. ಭೋಜೇಗೌಡ (ಶಿಕ್ಷಣ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 20-03-2020
ಉತ್ತರಿಸುವ ಸಚಿವರು : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ, ಯುವಜನ ಸಬಲೀಕರಣ ಹಾಗೂ ಕ್ರೀಡಾ ಇಲಾಖೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಲಾವಿದರು ವಿವಿಧ ಕಲೆಗಳಲ್ಲಿ ಗುರುತಿಸಿಕೊಂಡಿರುವ ಬಗ್ಗೆ ಸರ್ಕಾರದಲ್ಲಿ ಮಾಹಿತಿ ಇದೆಯೇ; ಇದ್ದಲ್ಲಿ ವಿವರ ನೀಡುವುದು;	• ಹೌದು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಅಕಾಡೆಮಿಗಳ ಮೂಲಕ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಪ್ರದರ್ಶನಗಳ ಮೂಲಕ ಗುರುತಿಸಿಕೊಂಡು ಕಲಾವಿದರು ಸೇವೆ ಸಲ್ಲಿಸುತ್ತಾ ಬರುತ್ತಿದ್ದಾರೆ. • ಯಕ್ಷಗಾನ, ಮೂಡಲಪಾಯ ಯಕ್ಷಗಾನ, ಪಡುವಲಪಾಯ ಯಕ್ಷಗಾನ ಕಲಾ ಪ್ರಕಾರಗಳಲ್ಲಿ ತೆಂಕು, ಬಡಗು, ಬಡಾಬಡಗು, ತಾಳ ಮದ್ದಲೆ, ಗೊಂಬೆಯಾಟ ಕಲಾಪ್ರಕಾರಗಳಿದ್ದು, ಮೂಡಲಪಾಯ ಯಕ್ಷಗಾನ ಕಲಾ ಪ್ರಕಾರದಲ್ಲಿ ಮೂಡಲಪಾಯ, ಘಟ್ಟದಕೋರೆ, ಕೇಳಿಕೆ ಕಲೆಗಳ ಕಲಾವಿದರನ್ನು ಗುರುತಿಸಲಾಗಿದೆ. • ಬಯಲಾಟ ಕಲಾ ಪ್ರಕಾರಗಳಾದ ದೊಡ್ಡಾಟ, ಸಣ್ಣಾಟ, ಶ್ರೀಕೃಷ್ಣ ಪಾರಿಜಾತ, ತೊಗಲುಗೊಂಬೆಯಾಟ, ಸೂತ್ರದ ಗೊಂಬೆಯಾಟ ಕಲಾವಿದರನ್ನು ಗುರುತಿಸಲಾಗಿದೆ. • ಕರ್ನಾಟಕ ಸಂಗೀತ, ಹಿಂದೂಸ್ತಾನಿ ಸಂಗೀತ, ಸುಗಮ ಸಂಗೀತ, ನೃತ್ಯ, ಕಥಾಕೀರ್ತನ ಮತ್ತು ಗಮಕ ಕಲಾ ಪ್ರಕಾರಗಳಿಗೆ ಸಂಬಂಧಿಸಿದಂತೆ ಕಲಾ ಪ್ರಕಾರಗಳ ಕಲಾವಿದರನ್ನು ಗುರುತಿಸಲಾಗಿದೆ. • ಶಿಲೆ, ಮರ, ಲೋಹ, ಮಣ್ಣು, ಮಿಶ್ರಮಾಧ್ಯಮ, ಫೈಬರ್, ಸಿಮೆಂಟ್ ಪ್ರಕಾರಗಳಲ್ಲಿನ ಶಿಲ್ಪ ಕಲಾವಿದರನ್ನು ಗುರುತಿಸಲಾಗಿದೆ. • ಚಿತ್ರಕಲಾ ಕ್ಷೇತ್ರದಲ್ಲಿ ಚಿತ್ರಕಲಾ ಕಲಾವಿದರನ್ನು ಗುರುತಿಸಲಾಗಿದೆ. • ವೃತ್ತಿ ರಂಗಭೂಮಿ, ಹವ್ಯಾಸಿ ರಂಗಭೂಮಿ, ಪೌರಾಣಿಕ, ಮಕ್ಕಳ ರಂಗಭೂಮಿ, ಗ್ರಾಮೀಣ ರಂಗಭೂಮಿ ಕ್ಷೇತ್ರದ ರಂಗ ಕಲಾವಿದರನ್ನು ಗುರುತಿಸಲಾಗಿದೆ. • ಜಾನಪದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಜಾನಪದ ಕಲಾವಿದರನ್ನು ಗುರುತಿಸಲಾಗಿದೆ. ವಿವರವನ್ನು **ಅನುಬಂಧ -1** ರಲ್ಲಿ ಲಗತ್ತಿಸಿದೆ.

2...

ಆ)	ಈ ಕಲಾವಿದರಿಗೆ ಪ್ರೋತ್ಸಾಹ ನೀಡಲು ಸರ್ಕಾರದಿಂದ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ; (ವಿವರ ನೀಡುವುದು).	ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿ ಬರುವ ವಿವಿಧ ಅಕಾಡೆಮಿಗಳಿಗೆ ಅನುದಾನವನ್ನು ನೀಡಲಾಗುತ್ತಿದೆ. ಸದರಿ ಅನುದಾನದಲ್ಲಿ ಆಯಾ ಅಕಾಡೆಮಿಗಳು ವಿವಿಧ ಯೋಜನೆಗಳನ್ನು ಹಮ್ಮಿಕೊಳ್ಳುವ ಮೂಲಕ ಕಲಾವಿದರಿಗೆ ಪ್ರೋತ್ಸಾಹ ನೀಡಲಾಗುತ್ತಿವೆ. • ವಿಚಾರ ಸಂಕಿರಣ, ತಾಲ್ಲೂಕು ಸಂಭ್ರಮ, ಜಿಲ್ಲಾ ಸಂಭ್ರಮ, ಜಾನಪದ ಜಾತ್ರೆ, ಸಂಗೀತ ನೃತ್ಯೋತ್ಸವ, ಗೌರವ ಪ್ರಶಸ್ತಿ, ಕಲಾ ಪ್ರದರ್ಶನ, ಶಿಬಿರ, ಕಾರ್ಯಾಗಾರ, ಸಂವಾದ, ಕಮ್ಮಟ, ಫೆಲೋಶಿಪ್, ಗುರುಶಿಷ್ಯ ಪರಂಪರೆ, ವಿದ್ಯಾರ್ಥಿ ವೇತನ / ಶಿಷ್ಯ ವೇತನ, ಪುಸ್ತಕ ಪ್ರಕಟಣೆ, ಮಾಸಾಶನ, ಸಾಕ್ಷ್ಯಚಿತ್ರ, ದಾಖಲೀಕರಣ ಮುಂತಾದ ಯೋಜನೆಗಳನ್ನು ರೂಪಿಸಿಕೊಳ್ಳುವ ಮೂಲಕ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ವಿವರವನ್ನು **ಅನುಬಂಧ -2** ರಲ್ಲಿ ಲಗತ್ತಿಸಿದೆ.
ಇ)	ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳು ಯಾವುವು; ವೆಚ್ಚವಾದ ಅನುದಾನ ಹಾಗೂ ಬಳಕೆಯಾಗದೆ ಉಳಿದ ಅನುದಾನ ಎಷ್ಟು; ಉಳಿಕೆಗೆ ಕಾರಣ ನೀಡುವುದು (ಕಳೆದ 3 ವರ್ಷಗಳ ಮಾಹಿತಿ ನೀಡುವುದು)	ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳ ವಿವರ ಹಾಗೂ ಅನುದಾನದ ವಿವರಗಳನ್ನು **ಅನುಬಂಧ – 03** ರಲ್ಲಿ ಲಗತ್ತಿಸಿದೆ. • ಅನುದಾನ ಉಳಿಕೆಯಾಗಿರುವುದಿಲ್ಲ.
ಈ)	ಕಳೆದ 3 ವರ್ಷಗಳಲ್ಲಿ ಜಿಲ್ಲೆಯಲ್ಲಿ ಅನುಷ್ಠಾನ ಮಾಡಿರುವ ಕಾರ್ಯಕ್ರಮಗಳು; ವೆಚ್ಚವಾದ ಅನುದಾನ, ಬಳಕೆಯಾಗದೆ ಉಳಿದ ಅನುದಾನ, ಉಳಿಕೆಗೆ ಕಾರಣ ಏನು?	ಮಾಹಿತಿಯನ್ನು **ಅನುಬಂಧ – 03** ರಲ್ಲಿ ಲಗತ್ತಿಸಿದೆ. • ಅನುದಾನ ಉಳಿಕೆಯಾಗಿರುವುದಿಲ್ಲ.

ಸಂಖ್ಯೆ: ಕಸಂವಾ 53 ಕವಿಸ 2020

(ಸಿ.ಟಿ.ರವಿ)
ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ,
ಯುವಜನ ಸಬಲೀಕರಣ ಹಾಗೂ
ಕ್ರೀಡಾ ಇಲಾಖೆ ಸಚಿವರು.